ಅದೊಂದು ವೃದ್ಧಾಶ್ರಮ. ಹೆಸರು ದಾದಾ – ದಾದಿ. ದಾದಾ ಎಂದರೆ ಹಿಂದಿ ಭಾಷೆಯಲ್ಲಿ ಅಜ್ಜನೆಂದೂ, ಬಂಗಾಲಿಯಲ್ಲಿ ಅಣ್ಣನೆಂದು ಅರ್ಥ. ದಾದಿ ಎಂದರೆ ಅಜ್ಜಿ ಇಲ್ಲವೇ ಸೇವಿಕೆ. ಅರ್ಥ ಏನಿದ್ದರೂ ಅದನ್ನು ಪ್ರಾರಂಭಿಸಿ ನಡೆಸಿಕೊಂಡು ಬಂದ ಶ್ರೀನಿವಾಸರಾಯರು ಹಾಗೂ ಅವರ ಪತ್ನಿಯನ್ನು ಅಲ್ಲಿಯ ನಿವಾಸಿಗಳೆಲ್ಲ ಅಣ್ಣ, ಅತ್ತಿಗೆ ಎಂದೇ ಕರೆಯುತ್ತಿದ್ದರು. ಇಬ್ಬರೂ ಈ ಆಶ್ರಮವನ್ನು ತಮ್ಮ ನಡುಹರೆಯದಲ್ಲಿ ಪ್ರಾರಂಭಿಸಿದ್ದರು. ಈಗ ಅವರಿಗೂ ವಯಸ್ಸಾಗಿದೆ. ಎಲ್ಲ ಉತ್ತಮ ಸೌಕರ್ಯಗಳಿಂದ ಕೂಡಿದ ಈ ಆಶ್ರಮಕ್ಕೆ ಸುಜಾತಾ ಸೇರಿಕೊಂಡಾಗ ಆಕೆಗೆ ಹತ್ತಿರ ಹತ್ತಿರ ಅರವತ್ತು. ಕೆಲವು ವರುಷಗಳ ಹಿಂದೆ ಕಾಲೇಜಿನಲ್ಲಿ ಉಪನ್ಯಾಸಕಿ ಆಗಿದ್ದಾಗ ಒಂದು ಪ್ರಸಿದ್ಧ ಪತ್ರಿಕೆಗೆ ಈ ಸಂಸ್ಥೆಯ ಬಗ್ಗೆ ಲೇಖನ ಒಂದನ್ನು ಬರೆದು ಕೊಡುವ ಉದ್ದೇಶದಿಂದ ಒಬ್ಬ ಛಾಯಾಚಿತ್ರಕಾರನ ಜತೆ ಇಲ್ಲಿ ಬಂದಿದ್ದಳು. ಹಾಗೆಯೇ ಅಲ್ಲಿನ ಪರಿಸರಕ್ಕೆ ಮಾರು ಹೋಗಿ ಈಗ ಕೆಲಸದಿಂದ ನಿವೃತ್ತಿಯಾದ ಬಳಿಕ ಸ್ವ ಇಚ್ಛೆಯಿಂದ ತನ್ನ ಹೆಸರನ್ನು ನೋಂದಾಯಿಸಿಕೊಂಡಳು. ಆಕೆ ಮನೆಬಿಟ್ಟು ಹೋಗದಂತೆ ತಡೆಯಲು, ವೃದ್ಧಾಶ್ರಮ ಸೇರದಂತೆ ಗೋಗರೆಯಲು ತನ್ನವರು ಅನ್ನಿಸಿಕೊಂಡವರು ಯಾರೂ ಇರಲಿಲ್ಲ. ತನ್ನ ಸಂಪತ್ತಿನಲ್ಲಿ ಅರ್ಧಭಾಗವನ್ನು ಇಬ್ಬರು ಅಣ್ಣಂದಿರಿಗೆ ಹಂಚಿಕೊಟ್ಟು, ಸ್ವಲ್ಪ ಹಣ, ದಾನ ಧರ್ಮಗಳಿಗೆ ವಿನಿಯೋಗಿಸಿ ಬಾಕಿ ಹಣವನ್ನು ಬ್ಯಾಂಕಿನಲ್ಲಿಟ್ಟಿದ್ದಳು. ತಿಂಗಳು ತಿಂಗಳು ಪಿಂಚಣಿ ಬೇರೆ ಬರುತ್ತಿತ್ತು. ಆಶ್ರಮಕ್ಕೆ ತಿಂಗಳಿಗೆ ಕೊಡಬೇಕಿದ್ದ ಆಹಾರ, ಪೋಷಣೆಗಳ ಖರ್ಚು ಕಳೆದರೂ ಅವಳಲ್ಲಿ ಬೇಕಾದಷ್ಟು ಹಣ ಉಳಿಯುತ್ತಿತ್ತು.

ಕಾಲೇಜಿನಲ್ಲಿ ಉಪನ್ಯಾಸಕಿ ಆಗಿದ್ದಾಗ ಸುಜಾತಾಗೆ ಸಮಯದ ಅಭಾವವಿತ್ತು. ಪಿಎಚ್.ಡಿ. ಅಧ್ಯಯನದಲ್ಲಿ ತೊಡಗಿದ್ದ ಆಕೆಗೆ ಬೇರೆ ವಿಷಯಗಳತ್ತ ಗಮನ ಹರಿಸಲು ಅವಕಾಶವೂ ಇರಲಿಲ್ಲ. ಈಗ ಆಶ್ರಮ ಸೇರಿದ ಬಳಿಕ ಸಮಯದ ಉಪಯುಕ್ತ ವಿನಿಯೋಗದ ಬಗ್ಗೆ ಆಕೆ ಚಿಂತಿಸಿದಳು. ಅದೂ ಕೆಲವೇ ದಿನಗಳು ಮಾತ್ರ. ಇಲ್ಲಿ ಆಕೆ ಇತರರಂತೆ ಕೊಠಡಿಯಲ್ಲಿ ಇರಲು ಇಚ್ಛಿಸದೆ, ಲಭ್ಯವಿರುವ ಕೆಲವೇ ಕಾಟೇಜ್‌ಗಳಲ್ಲಿ ಒಂದನ್ನು ಖರೀದಿಸಿದ್ದಳು. ಇಷ್ಟಪಟ್ಟರೆ ಅಡುಗೆ ಮಾಡುತ್ತಿದ್ದಳು. ಇಲ್ಲವೇ ಮಾಸ್ಟರ್ ಕಿಚನ್‌ಗೆ ಹೋಗಿ ತಿಂದು ಬರುತ್ತಿದ್ದಳು. ಅನೇಕ ಶ್ರೀಮಂತ ವೃದ್ಧರು ಇವಳಂತೆಯೇ ಕಾಟೇಜ್‌ಗಳನ್ನು ಖರೀದಿಸಿ ವ್ಯವಸ್ಥಿತವಾದ ಸುಖಜೀವನ ನಡೆಸುತ್ತಿದ್ದರು. ಹೆತ್ತವರನ್ನು ಕಾಣಲು ದೂರದಿಂದ, ಕೆಲವೊಮ್ಮೆ ಹೊರದೇಶದಿಂದ ಬರುವ ಮಕ್ಕಳನ್ನು ಕೆಲದಿನ ಉಳಿಸಿಕೊಳ್ಳುವ ಸೌಲಭ್ಯವೂ ಆ ಆಶ್ರಮದಲ್ಲಿತ್ತು.

ಬೆಳಿಗ್ಗೆ ಕ್ರಮವಾಗಿ ಮೆಂಟೆನೆನ್ಸ್ ಸ್ಟಾಫ್ ಬಂದು ಕಾಟೇಜ್, ಕೊಠಡಿಗಳನ್ನು ಶುದ್ಧಗೊಳಿಸಿ ಬಟ್ಟೆ ಒಗೆದು, ಹಿಂದಿನ ದಿನದ ಬಟ್ಟೆ ಮಡಚಿ, ಇಸ್ತ್ರಿಹಾಕಿ ಕ್ರಮವಾಗಿ ಕಪಾಟಿನಲ್ಲಿಟ್ಟು ಹೊರಟು ಹೋಗುತ್ತಿದ್ದರು. ಸುಜಾತಾ ಒಬ್ಬಂಟಿ, ಮೇಲಾಗಿ ವಿದ್ಯಾವಂತೆ ಎಂದರಿತು ಶ್ರೀನಿವಾಸರಾಯರು ಅವಳಲ್ಲಿ ಚಿಕ್ಕ ಚಿಕ್ಕ ಸಲಹೆ ಕೇಳಲು ಬರುತ್ತಿದ್ದವರು ಕ್ರಮೇಣ ಅವಳ ಅಭಿಪ್ರಾಯಗಳಿಗೇ ಮಹತ್ವ ಕೊಡಲಾರಂಭಿಸಿದರು.

ಜೀವನದಲ್ಲಿ ಕಲಿಯಬೇಕಾದದ್ದು ಬಹಳಷ್ಟಿದೆ. ಅದು ಸಾಯುವವರೆಗೆ ಇರುವ ಕಾರ್ಯವಿಧಾನ. ಅಲ್ಲಿರುವ ಅನೇಕ ವಿದ್ಯಾವಂತ, ಶ್ರೀಮಂತ ವೃದ್ಧರು ತಾವಿರುವುದು ವೃದ್ಧಾಶ್ರಮದಲ್ಲಿ ಎಂದು ಹೇಳಿಕೊಳ್ಳಲು ಅಸಹ್ಯಪಡುವವರು. ಅಂಥವರು ತಮ್ಮ